ಜೆ. ಎಸ್. ಎಸ್

# ಶ್ರೀ ಮಂಜುನಾಥೇಶ್ವರ ಕೇಂದ್ರಿಯ ಶಾಲೆ,

ಶಿವಳ್ಳಿ ರಸ್ತೆ, ಉಣಕಲ್, ಹುಬ್ಬಳ್ಳಿ.

ಅರ್ಧ ವಾರ್ಷಿಕ ಪರೀಕ್ಷೆ- (೨೦೨೦-೨೧)

ತರಗತಿ: ೬ ವಿಷಯ:ಕನ್ನಡ ಗರಿಷ್ಠ ಅಂಕ:೮೦

ಅ ಭಾಗ ( ಬಹು ಆಯ್ಕೆ ಪ್ರಶ್ನೆಗಳು) -೪೦ ಅಂಕಗಳು

ಆ ಭಾಗ ( ವಿವರಣಾತ್ಮಕ ಪ್ರಶ್ನೆಗಳು) -೪೦ ಅಂಕಗಳು

## PART- A

ವಿಭಾಗ -A (ವಾಚನ ಮತ್ತು ಗ್ರಹಿಕಾ ಕೌಶಲ)

ಪ್ರಶ್ನೆ.ಅ) ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5x1=5

ಸೂರ್ಯ ವಂಶದ ರಾಜನಾದ ದಶರಥನು ಕೋಸಲ ದೇಶದ ರಾಜಧಾನಿ 'ಅಯೋಧ್ಯೆ'ಯನ್ನು ಆಳುತ್ತಿದ್ದನು. ಆತನಿಗೆ ಮೂರು ಜನ ಹೆಂಡತಿಯರು. ಕೌಸಲ್ಯೆ,ಸುಮಿತ್ರ ಮತ್ತು ಕೈಕೆಯರು. ದಶರಥನು 'ಪುತ್ರಕಾಮೇಷ್ಠಿ'ಯಾಗವನ್ನು ಮಾಡಿ ಮಕ್ಕಳನ್ನು ಪಡೆಯುತ್ತಾನೆ. ಕೌಸಲ್ಯೆಯ ಮಗ ಶ್ರೀ ರಾಮ, ಕೈಕೆಯ ಮಗ ಭರತ, ಸುಮಿತ್ರೆಯ ಮಕ್ಕಳು ಲಕ್ಷ್ಮಣ ಮತ್ತು ಶತ್ರುಘ್ನ.

ಪ್ರಶ್ನೆಗಳು:

೧)ಸೂರ್ಯ ವಂಶದ ರಾಜನಾರು ____________________

ಅ) ಭರತ ಬ) ಲಕ್ಷ್ಮಣ ಕ) ದಶರಥ ಡ) ಶತ್ರುಘ್ನ

೨)ಕೋಸಲ ದೇಶದ ರಾಜಧಾನಿ ____________________

ಅ) ಅಯೋಧ್ಯೆ ಬ) ಪಾಟಲಿ ಪುತ್ರ ಕ) ಮಗದ ಡ) ಹಸ್ತಿನಾಪುರ

೩)ಕೌಸಲ್ಯೆ,ಸುಮಿತ್ರೆ ಮತ್ತು ಕೈಕೆಯರ ಪತಿಯ ಹೆಸರು ____________________

ಅ) ದಶರಥ ಬ) ನವರಥ ಕ) ಅಷ್ಟರಥ ಡ) ಅಧೀರಥ

೪) ಅಯೋಧ್ಯೆಯ ರಾಜನು ಮಾಡಿದ ಯಾಗ ____________________

ಅ) ಕಾಮೇಷ್ಠ ಬ) ಸಂತಾನಕಾಮೇಷ್ಠಿ ಕ) ಪುತ್ರಿಕಾಮೇಷ್ಠಿ ಡ) ಪುತ್ರಕಾಮೇಷ್ಠಿ

೫) ಕೌಸಲ್ಯೆಯ ಮಗನ ಹೆಸರು ____________________

ಅ) ಲಕ್ಷ್ಮಣ ಬ) ಶ್ರೀ ರಾಮ ಕ)ಭರತ ಡ) ಶತ್ರುಘ್ನ

ಆ)ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5x1=5

ವೈದ್ಯರು ಶಾಲೆಗೆ ಆಗಮಿಸಿ

ಮಕ್ಕಳ ಹಲ್ಲು ತಪಾಸಣೆ ಮಾಡಿದರು

ವೈದ್ಯರು ಮಕ್ಕಳ ಹಲ್ಲನು ನೋಡದೇ

ಅವರ ಜೇಬಿಗೆ ಕೈ ಹಾಕಿ ಹುಡುಕಿದರು

ಚಾಕುಲೇಟ್, ಬೆಂಡು-ಬತ್ತಾಸು, ಕಡಲೆ-ಶೇಂಗಾ ಸಿಕ್ಕವು

ತಿನಿಸನು ತಿಂದ ಎಲ್ಲರ ಹಲ್ಲನ್ನು

ವೈದ್ಯರು ತೆರೆದು ನೋಡಿದರು

ಅವರ ಹಲ್ಲಿನಲ್ಲಿ ಹುಳುಕು,ವಸಡಲಿ ರಕ್ತ

ಸಾಕಷ್ಟು ವಾಸನೆ ಬರುತ್ತಿತ್ತು

ವೈದ್ಯರು ಮಕ್ಕಳಿಗೆ ದಿನಕ್ಕೆ ಎರಡು ಬಾರಿ

ಹಲ್ಲನು ತಿಕ್ಕಲು ಹೇಳಿ ಆರೋಗ್ಯ ಭಾಗ್ಯದ

ಮಹತ್ವವನ್ನು ಸಾರಿದರು

ಮಕ್ಕಳು ವೈದ್ಯರ ಸಲಹೆಯನ್ನು ದಿನನಿತ್ಯವೂ ಪಾಲಿಸಿದರು

ಪ್ರಶ್ನೆಗಳು::

೧)ವೈದ್ಯರು ಶಾಲೆಗೆ ಆಗಮಿಸಿ __________ತಪಾಸಣೆ ಮಾಡಿದರು

ಅ) ಹಲ್ಲು ಬ) ಒಸಡು ಕ) ಕಣ್ಣು ಡ) ಕಿವಿ

೨)ಮಕ್ಕಳ ಜೇಬಲ್ಲಿ _____________ಸಿಕ್ಕವು.

ಅ) ಗೋಡಂಬಿ ಬ) ಬಾದಾಮಿ ಬೀಜ ಕ) ಹುಣಸೆ ಹಣ್ಣು ಡ) ಚಾಕುಲೇಟು

೩) ಹಲ್ಲಿನಲ್ಲಿ ___________ಇತ್ತು.

ಅ) ಹುಳುಕು ಬ) ಕಲೆ ಕ) ಬಣ್ಣ ಡ) ಕಡ್ಡಿ

೪)ದಿನಕ್ಕೆ _________ಬಾರಿ ಹಲ್ಲು ತಿಕ್ಕಬೇಕು.

ಅ) ಒಂದು ಬ) ಎರಡು ಕ) ಮೂರು ಡ) ನಾಲ್ಕು

೫) ವೈದ್ಯ ಎಂಬ ಪದದ ಬಹುವಚನ ರೂಪ ________

ಅ) ವೈದ್ಯಂದಿರು ಬ) ವೈದ್ಯರು ಕ) ವೈದ್ಯಕೀಯ ಡ) ವೈದ್ಯಗಳು

ಇ. ಬಿಟ್ಟ ಸ್ಥಳಗಳಿಗೆ ಸೂಕ್ತ ಉತ್ತರವನ್ನು ಆಯ್ದು ಬರೆಯಿರಿ. 4x1=4

೧) ಒಂದು ದಿನ ಪುಟ್ಟಿಗೆ ______ಬಂದಿತು.

ಅ)ಯೋಚನೆ ಬ)ಹರುಷ ಕ)ನವಿಲುಗರಿ ಡ)ರೆಕ್ಕೆಯು

೨) ಗಂಧರ್ವಸೇನೆ ಎಂದು ಕರೆಯುತ್ತಿದ್ದ ಪ್ರಾಣಿಯ ಹೆಸರು________

ಅ)ಹುಲಿ ಬ)ಕತ್ತೆ ಕ)ನರಿ ಡ)ಮೊಲ

೩) ನೀ ಹೋದ ಮರುದಿನ ________?

ಅ )ಜವಾಹರಲಾಲ್ ನೆಹರು ಬ ಬಾಬಾ ಸಾಹೇಬ ಕ) ಗಾಂಧೀಜಿ ಡ) ಡಾ. ರಾಧಾಕೃಷ್ಣನ್

೪)________ ಎಂಬುವುದು ರಾಜಕುಮಾರ್ ಅವರ ಮೊದಲ ಹೆಸರು.

ಅ)ಮುತ್ತುರಾಜ ಬ)ರಾಜಾ ಕ)ಮುತ್ತಣ್ಣ ಡ)ಮುತ್ತು

## ವಿಭಾಗ –B (ಅನ್ವಯಿಕ ವ್ಯಾಕರಣ)

ಪ್ರಶ್ನೆ೨) ಕೊಟ್ಟಿರುವ ಪ್ರಶ್ನೆಗಳಿಗೆ ಸೂಕ್ತ ಉತ್ತರ ಆಯ್ದು ಬರೆಯಿರಿ. 16X1=16

೧) 'ತಮ್ಮ' ಎಂಬ ಪದವನ್ನು ವಚನ ಬದಲಿಸಿದಾಗ _______

ಅ) ತಮರು ಬ) ತಮ್ಮರು ಕ) ತಮ್ಮಗಳು ಡ) ತಮ್ಮಂದಿರು

೨) 'ಚಿಕ್ಕಪ್ಪ' ಎಂಬ ಪದವನ್ನು ಲಿಂಗ ಬದಲಿಸಿ ಬರೆದಾಗ ________

ಅ) ಅಮ್ಮಮ್ಮ ಬ) ಅತ್ತೆಮ್ಮ ಕ) ದೊಡ್ಡಮ್ಮ ಡ) ಚಿಕ್ಕಮ್ಮ

೩) ಕನ್ನಡ ವರ್ಣ ಮಾಲೆಯಲ್ಲಿರುವ ಒಟ್ಟು ಅಕ್ಷರ _____

ಅ) ೪೮ ಬ) ೪೯ ಕ) ೫೦ ಡ) ೫೧

೪) 'ರೀ' ಎಂಬ ಗುಣಿತಾಕ್ಷರವನ್ನು ಬಿಡಿಸಿ ಬರೆದಾಗ _______

ಅ) ರ್+ಈ ಬ) ರ್+ಇ ಕ) ರ್+ಎ ಡ) ರ್+ಉ

೫) ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆ ________

ಅ) ಭಕ್ತ ಬ) ಸೂರ್ಯ ಕ) ಅಮ್ಮ ಡ) ಅನ್ಯ

೬) ರೂಢನಾಮಕ್ಕೆ ಉದಾಹರಣೆ __________

ಅ) ರವಿ ಬ) ಕಳ್ಳ ಕ) ಪೋಲಿಸ ಡ) ಶಾಲೆ

೭) 'ಗೌರಿಯಿಂದ' ಎಂಬ ಪದದಲ್ಲಿರುವ ವಿಭಕ್ತಿ ______

ಅ) ಪ್ರಥಮ ಬ) ದ್ವಿತೀಯ ಕ) ತ್ರತೀಯಾ ಡ) ಚತುರ್ಥಿ

೮) ರಾಮನು ಮರವನ್ನು ಹತ್ತಿದನು. ಈ ವಾಕ್ಯದಲ್ಲಿರುವ ಕರ್ಮ ಪದ ________

ಅ) ರಾಮನು ಬ) ಮರವನ್ನು ಕ) ಹತ್ತಿದನು ಡ) ಹತ್ತು

೯) 'ದೊಡ್ಡ ಮನೆ' ಎಂಬ ಪದದಲ್ಲಿ ಗುಣವನ್ನು ಸೂಚಿಸುವ ಪದ ________

ಅ) ದೊಡ್ಡ ಬ) ಮನೆ ಕ) ದೊಡ್ಡಮನೆ ಡ) ದೊಡ್ಮನೆ

೧೦) 'ಒಂದು ದಿನ' ಎಂಬ ಪದದಲ್ಲಿರುವ ಸಂಖ್ಯಾಪದ _________

ಅ) ದಿನ ಬ) ಒಂದು ಕ) ಒಂದು ದಿನ ಡ) ಒಂದಿನ

೧೧) ದ್ವಿರುಕ್ತಿಗೆ ಒಂದು ಉದಾಹರಣೆ __________

ಅ) ಬಂಧು –ಬಳಗ ಬ) ಬನ್ನಿ ಬನ್ನಿ ಕ) ಜುಳುಜುಳು ಡ) ಆಹಾ! ಒಹೋ!

೧೨) ಜೋಡು ನುಡಿಗೆ ಒಂದು ಉದಾಹರಣೆ __________

ಅ) ಹಣ್ಣು-ಹಂಪಲು ಬ) ಬನ್ನಿ ಬನ್ನಿ ಕ) ಜುಳುಜುಳು ಡ) ಆಹಾ! ಒಹೋ!

೧೩) ಅನುಕರಣಾವ್ಯಯಕ್ಕೆ ಒಂದು ಉದಾಹರಣೆ __________

ಅ) ಹಣ್ಣು-ಹಂಪಲು ಬ) ಬನ್ನಿ ಬನ್ನಿ ಕ) ಪಟ ಪಟ ಡ) ಹೌದು, ಹೌದು

೧೪) ( ) ಇಲ್ಲಿ ಕೊಟ್ಟಿರುವ ಲೇಖನ ಚಿಹ್ನೆಯ ಹೆಸರು_________

ಅ) ಆವರಣಚಿಹ್ನೆ ಬ) ಪ್ರಶ್ನಾರ್ಥಕಚಿಹ್ನೆ ಕ) ಉದ್ಧರಣಚಿಹ್ನೆ ಡ) ಭಾವಸೂಚಕಚಿಹ್ನೆ

೧೫) 'ಟಾರ' ಎಂಬ ಪದದ ಸಮಾನಾರ್ಥಕ ಪದ __________

ಅ) ಕಚ್ಚಾ ರಸ್ತೆ ಬ) ಮುಖ್ಯ ರಸ್ತೆ ಕ) ಅಡ್ಡ ರಸ್ತೆ ಡ) ಡಾಂಬರು ರಸ್ತೆ

೧೬) 'ಹಣ್ಣಿನಂಗಡಿ' ಎಂಬ ಪದವನ್ನು ಬಿಡಿಸಿ ಬರೆದಾಗ _________

ಅ) ಹಣ್ಣಿನ+ಅಂಗಡಿ ಬ) ಹಣ್ಣು +ಅಂಗಡಿ ಕ) ಅಂಗಡಿ +ಹಣ್ಣು ಡ) ಹಣ್ಣ+ ಅಂಗಡಿ

ವಿಭಾಗ -C (seen passage)

ಪ್ರಶ್ನೆ೩) ಅ. ಕೆಳಗಿನ ಕೊಟ್ಟಿರುವ ಪಾಠದ ಘಟಕವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ. 5X1=5

ಡಾ. ರಾಜಕುಮಾರ್ ಅವರು ೧೯೨೯ ಎಪ್ರಿಲ್ ೨೪ರಂದು ಜನಿಸಿದರು. ಚಾಮರಾಜನಗರದಿಂದ ಹತ್ತಿರವಿರುವ ಗಾಜನೂರು ಇವರ ಹುಟ್ಟೂರು. ಇವರ ತಂದೆ ಪುಟ್ಟಸ್ವಾಮಯ್ಯ ತಾಯಿ ಲಕ್ಷ್ಮಮ್ಮ. ಇವರ ಮೊದಲ ಹೆಸರು ಮುತ್ತುರಾಜ. ನಂತರ ತಂದೆಯ ದೆಸೆಯಿಂದ ನಟನೆಯನ್ನು ಕಲಿತು, ಗುಬ್ಬಿ ವೀರಣ್ಣ ಕಂಪನಿ ಸೇರಿದರು. ಇವರು ಮೊದಲು ಚಲನಚಿತ್ರದಲ್ಲಿ ನಾಯಕ ನಟರಾಗಿ ನಟಿಸಿದ ಚಲನಚಿತ್ರ ಬೇಡರ ಕಣ್ಣಪ್ಪ.

ಪ್ರಶ್ನೆಗಳು:

೧) ಡಾ. ರಾಜಕುಮಾರ್ ಅವರು ________________ರಂದು ಜನಿಸಿದರು.

ಅ) ೧೯೨೯ ಎಪ್ರಿಲ್೨೪ ಬ) ೧೯೨೯ ಮೇ೨೪ ಕ) ೧೯೨೯ ಜೂನ್೨೪ ಡ) ೧೯೨೯ ಜುಲೈ೨೪

೨) ಚಾಮರಾಜನಗರದಿಂದ ಹತ್ತಿರವಿರುವ ______________ಇವರ ಹುಟ್ಟೂರು.

ಅ) ಗಜನುರ ಬ) ಗಾಜೆನೂರ್ ಕ) ಕಾಜುನೂರ ಡ) ಗಾಜನೂರು

೩) ಡಾ. ರಾಜಕುಮಾರ್ ರವರ ತಂದೆ __________ತಾಯಿ ____________.

ಅ) ಶಾಸ್ತ್ರಿ, ಕಮಲಮ್ಮ ಬ) ಪುಟ್ಟಸ್ವಾಮಯ್ಯ, ಲಕ್ಷ್ಮಮ್ಮ ಕ) ಆದಿತ್ಯ, ಲಕ್ಷ್ಮಮ್ಮ ಡ) ಪುಟ್ಟಸ್ವಾಮಿ,ಸೀತಮ್ಮ

೪) ಡಾ. ರಾಜಕುಮಾರ್ ರವರು ಗುಬ್ಬಿ __________ಸೇರಿದರು.

ಅ) ಪಂಚಾಕ್ಷರಿ ಗವಾಯಿ ಕಂಪನಿ ಬ) ವೀರಣ್ಣ ಕಂಪನಿ ಕ) ನಾಟ್ಯಸಂಘ ಕಂಪನಿ ಡ) ಕಲಾ ಕಂಪನಿ

೫) ಡಾ. ರಾಜಕುಮಾರ್ ರವರು ನಾಯಕ ನಟರಾಗಿ ನಟಿಸಿದ ಚಲನಚಿತ್ರ ____________.

ಅ) ಬೇಡರ ಕಣ್ಣಪ್ಪ ಬ) ಸಂಪತ್ತಿಗೆ ಸವಾಲ್ ಕ) ಜೀವನ ಚೈತ್ರ ಡ) ಹೊಸ ಬೆಳಕು

(seen poem)

ಆ. ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ. 5x1=5

ನೀ ಹೋದ ಮರುದಿನ ಮೊದಲಂಗೆ ನಮ್ ಬದುಕು
ಹಾಗ್ಯಾದೋ ಬಾಬಾ ಸಾಹೇಬ
ನಿನ್ನಂಗ ದುಡಿದವರು ಕಳಕಳಿಯ ಪಡುವವರು
ಇನ್ನುತನ ಬರಲಿಲ್ಲ ಒಬ್ಬ!!

ಬಾಬಾಸಾಹೇಬರೆನು ಹುಚ್ಚರಲ್ಲವೇ ಅಲ್ಲ

ಗಂಧಿಜೊತೆ ಇರಲಿಲ್ಲ ಸುಮ್ಮ

ಅಪ್ಪು ಒದ್ದಾಡಿದಕೆ ಇಂಗ್ಯೆತೆ ನಮ್ ಬದುಕು

ತಿಳಿಯೀತೆ ಈಗ್ಲಾದ್ರು ತಮ್ಮ॥

ಪ್ರಶ್ನೆಗಳು:

೧)_________ಹೋದ ಮರುದಿನ ಮೊದಲಿನ ಹಾಗೆ ನಮ್ಮ ಬದುಕು.

ಅ)ಜವಾಹರಲಾಲ್ ನೆಹರು ಬ)ಡಾ.ಬಿ.ಅರ್.ಅಂಬೇಡ್ಕರ್ ಕ)ಭಗತ್ ಸಿಂಗ್ ಡ)ರವೀಂದ್ರನಾಥ ಠಾಗೋರ್

೨)ನಿನ್ನಂಗ ________ಕಳಕಳಿಯ ಪಡುವವರು

ಅ)ಬೈದವರು ಬ)ಹೊಡೆದವರು ಕ)ದುಡಿದವರು ಡ)ತಿಂದವರು

೩)ಬಾಬಾಸಾಹೇಬರು __________ಜೊತೆ ಇದ್ದರು.

ಅ)ಚಂದಶೇಖರ್ ಆಜಾದ್ ಬ)ಮೋತಿಲಾಲ್ ನೆಹರು ಕ)ಮಂಗಲ್ ಪಾಂಡೆ ಡ)ಗಾಂಧೀಜಿ

೪)ಅಪ್ಪು __________ಇಂಗ್ಯೆತೆ ನಮ್ ಬದುಕು

ಅ)ಜಿಗಿದಾಡಿದಕೆ ಬ)ಉರುಳಾಡಿದಕೆ ಕ)ಒದ್ದಾಡಿದಕೆ ಡ)ಕುಣಿದಾಡಿದಕೆ

೫)'ತಮ್ಮ' ಎಂಬ ಪದವನ್ನು ಲಿಂಗ ಬದಲಿಸಿ ಬರೆದಾಗ______

ಅ)ತಂಗಿ ಬ)ಅತ್ತೆ ಕ)ಅಮ್ಮ ಡ)ಅಜ್ಜಿ

## PART B

ಪ್ರಶ್ನೆ೪) ಅ. ೨-೩ ವಾಕ್ಯಗಳಲ್ಲಿ ಉತ್ತರಿಸಿ. (any 4) 4X2=8

೧) ಭೂಮಿಯ ಪೋಷಕ ಯಾರು? ಅವನು ಏಕೆ ದುಡಿಯುತ್ತಾನೆ?

೨) ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು? ನಂತರ ಯಾವ ಯಾವ ಗ್ರಹಗಳಿಗೆ ಹಾರಿದಳು?

೩) ಸೂರ್ಯನಿಂದ ಮಕ್ಕಳು ಕಲಿಯಬೇಕಾದ್ದೇನು? ಅವನು ಯಾವ ಕರ್ತವ್ಯ ಮಾಡುವನು?

೪)ನೋಡಿ ಮಕ್ಕಳೇ,ಪುಸ್ತಕಗಳು ಜ್ಞಾನ ಬಂಡಾರ. ಈ ಮಾತನ್ನು ಯಾರು ಯಾರಿಗೆ ಹೇಳಿದರು.ಈ ಪಾಠದ ಹೆಸರನ್ನು ಬರೆಯಿರಿ.

೫)ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು. ಈ ಮಾತನ್ನು ಯಾರು ಯಾರಿಗೆ ಹೇಳಿದರು.ಈ ಪಾಠದ ಹೆಸರನ್ನು ಬರೆಯಿರಿ.

ಆ.೪–೫ ವಾಕ್ಯಗಳಲ್ಲಿ ಉತ್ತರಿಸಿ. ( any 4 ) 4X3=12

೧) ಪುಟ್ಟಿ ಮಂಗಳ ಗ್ರಹಕ್ಕೆ ಹೋಗಿ, ಯೋಗಿ ಎಂಬ ಬಂಡೆಯ ಜೊತೆ ಏನು ಮಾತನಾಡಿದಳು ನಿಮ್ಮ ಮಾತುಗಳಲ್ಲಿ ವಿವರಿಸಿ?

೨) 'ಬೇಸಿಗೆ' ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩) ಒಡ್ಡೋಲಗದಲ್ಲಿ ನಡೆದ ಪ್ರಸಂಗವನ್ನು ವಿವರಿಸಿ.

೪) ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ವಿವರಿಸಿ.

೫) ಕೃಷ್ಣ –ಸುಧಾಮರು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡದ್ದು ಹೇಗೆ?ವಿವರಿಸಿ.

ಇ.೮-೧೦ ವಾಕ್ಯಗಳಲ್ಲಿ ಉತ್ತರಿಸಿ. ( any 1) 1X4=4

೧) 'ಮಂಗಳ ಗ್ರಹದಲಿ ಪುಟ್ಟಿ' ಎಂಬ ಪಾಠದಿಂದ ನೀವು ಏನು ತಿಳಿದುಕೊಂಡಿರುವಿರಿ ಅದನ್ನು ವಿವರವಾಗಿ ಬರೆಯಿರಿ.

೨) 'ಕೃಷ್ಣ –ಸುಧಾಮ ಪಾಠದಿಂದ ನೀವು ಏನನ್ನು ತಿಳಿದುಕೊಂಡಿರುವಿರಿ ಅದನ್ನು ವಿವರವಾಗಿ ಬರೆಯಿರಿ.

## ಪೂರಕ ಪಾಠಗಳು

ಪ್ರಶ್ನೆ೭) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 4X1=4

೧)ಕನ್ನಡ ರಾಘವ ಎಂದು ಪ್ರಸಿದ್ಧರಾದವರು ಯಾರು?

೨)ಮಹಮ್ಮದ್ ಪೀರ್ ರವರ ತಂದೆತಾಯಿಯ ಹೆಸರೇನು?

೩)ಮಹಮ್ಮದ್ ಪೀರ್ ಅವರು ಯಾರ ಆಶ್ರಯದಲ್ಲಿ ಬೆಳೆದರು?

೪)ಮಹಮ್ಮದ್ ಪೀರ್ ಅವರಿಗೆ ನಾಟಕದ ಅಭಿರುಚಿ ಯಾವಾಗ ಹತ್ತಿತು?

ಪ್ರಶ್ನೆ೭) ಬೇಕಾದ ೩ಕ್ಕೆ ಉತ್ತರಿಸಿ. ( any 3 ) 4X3=12

೧)'ಕೈ ಕೆಸರಾದರೆ ಬಾಯಿ ಮೊಸರು'ಎಂಬ ಗಾದೆಯನ್ನು ವಿಸ್ತರಿಸಿ ಬರೆಯಿರಿ.

೨)ನಿಮ್ಮ ಜನ್ಮದಿನವನ್ನು ಆಚರಿಸಲು ಬೆಂಗಳೂರಿನಲ್ಲಿರುವ ನಿಮ್ಮ ಅಕ್ಕಳಿಗೆ ಆಹ್ವಾನಿಸಿ ಪತ್ರ ಬರೆಯಿರಿ.

೩)'ಹಾಸಿಗೆ ಇದ್ದಷ್ಟು ಕಾಲು ಚಾಚು ' ಎಂಬ ಗಾದೆಯನ್ನು ವಿಸ್ತರಿಸಿ ಬರೆಯಿರಿ.

೪)ನಿಮ್ಮ ಹೆಸರು ಕಮಲ್/ ಕಮಲಾ ಎಂದು ತಿಳಿದು, ಅರ್ಧ ವಾರ್ಷಿಕ ಪರೀಕ್ಷೆ ತಯಾರಿ ಕುರಿತು ಬೆಳಗಾವಿಯಲ್ಲಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ.